'ಒಂದು ಸಂತೋಷದ ವಿಷಯ, ಇನ್ನೊಂದು ಬ್ಯಾಡ್ ನ್ಯೂಸ್ ಯಾವುದನ್ನು ಮೊದಲು ಹೇಳಲಿ?'

'ಎಲ್ಲರೂ ಎರಡನೆಯದು ಅನ್ನುತ್ತಾರೆ. ಆದರೆ ನನಗೆ ಗುಡ್‌ನ್ಯೂಸ್ ಮೊದಲು ಹೇಳಿ, ಎರಡನೆಯದನ್ನು ತಡೆದುಕೊಳ್ಳುವುದಕ್ಕೆ ಶಕ್ತಿ ಬರುತ್ತದೆ'

'ತೀರಾ ಕೆಟ್ಟ ಸುದ್ದಿಯೇನೂ ಅಲ್ಲ ಬಿಡು. ನಿನಗೆ ಪ್ರಮೋಷನ್ ಸಿಕ್ಕಿದೆ... ನಿನಗೆ ಮುಂಬೈಗೆ ಟ್ರಾನ್ಸ್‌ಫರ್ ಆಗಿದೆ. ಅದು ಎರಡನೆಯದು'

'ಥ್ಯಾಂಕ್ಸ್ ಸರ್' ಎಂದನು ಚುಟುಕಾಗಿ.

'ಅದ್ಯಾಕಯ್ಯಾ ಅಷ್ಟು ಒಳ್ಳೆ ಸುದ್ದಿ ಕೇಳಿ ನಿರ್ವಿಕಾರವಾಗಿದ್ದೀಯಲ್ಲ? ಅಂದ ಹಾಗೆ ನಿನ್ನ ರಿಪೋರ್ಟ್ ಓದಿದೆ. ಕೇಸ್‌ನಲ್ಲಿ ಬಹಳ ಒಳ್ಳೆಯ ಪ್ರೋಗ್ರೆಸ್... ಹಾಂ, ಕೇಳುವುದು ಮರೆತಿದ್ದೆ. ಮಿಜ್ರಾಡಿನ್‌ನ ಹೆಂಡತಿಯಿಂದ ಆ ಟೆರರಿಸ್ಟ್ ಬಗ್ಗೆ ಯಾವ ವಿವರಗಳನ್ನೂ ಸಂಗ್ರಹಿಸಲಾರೆಯಾ?'

'ಅವನ ಬಗ್ಗೆ ನಮಗೆಷ್ಟು ಗೊತ್ತೋ ಅವಳಿಗೂ ಅಷ್ಟೇ ಗೊತ್ತಿದೆ. ನಿಜಕ್ಕೂ ಅವನು ಮನೆಗೇ ಬರುತ್ತಿಲ್ಲವಂತೆ. ಅವನಿಗೆ ಮಗನ ಮೇಲೆ ಅತಿಯಾದ ಪ್ರೀತಿ ಇದೆಯಂತೆ. ಅದೊಂದು ಹೇಳಿದಳು. ಮಗನಿಗೋಸ್ಕರವೇ ಅವನು ಮೂರು ಮದುವೆ ಮಾಡಿಕೊಂಡ. ಮಗನನ್ನು ದೊಡ್ಡ ಟೆರರಿಸ್ಟ್‌ನಾಗಿ ಮಾಡಿ ಚರಿತ್ರೆಯಲ್ಲಿ ಚಿರಸ್ಥಾಯಿಯಾಗಿ ಮಾಡಬೇಕೆನ್ನುವುದು ಅವನ ಆಸೆ. ಆ ಮಗನ ಮೂಲಕವೇ ನಾವು ಮಿಜ್ರಾಡಿನ್ ವಿವರಗಳನ್ನು ಸಂಗ್ರಹಿಸಬೇಕು'

'ಮುಂಬೈಗೆ ಹೋಗುವ ಮೊದಲೇ ಈ ಕೇಸು ಮುಗಿಸಿ ಮಾಡಬೇಕು'

'ಹೌದು ಸರ್. ಹೆಚ್ಚು ಟೈಂ ಇಲ್ಲ. ಗಫಾರ್‌ಖಾನ್ ಮುದುಕರು. ಅವರ ಪ್ರಾಣಕ್ಕೆ ಸಂಚಕಾರ ಬರುವ ಮೊದಲು ರಕ್ಷಿಸಬೇಕು. ಅದಕ್ಕೇ ಪ್ರೊಮೋಷನ್ ಬಗ್ಗೆ ಹೇಳಿದಾಗ ನನಗೆ ಸಂತೋಷವಾಗಲಿಲ್ಲ'.

'ನೀನು ಕೇಸು ತೆಗೆದುಕೊಂಡಿರುವುದರಿಂದ ಖಂಡಿತ ಗೆಲ್ಲುತ್ತೇವೆಂಬ ವಿಶ್ವಾಸ ನನಗಿದೆ. ಅದಿರಲಪ್ಪಾ, ಹೊಸ ಸಂಸಾರ ಹೇಗಿದೆ?'

'ಮೂರು ಮುಳ್ಳು ಆರು ಕಲ್ಲು ಎನ್ನುವ ಹಾಗಿದೆ' ಎಂದನು ಕೃಷ್ಣ.

***

ಆ ಸಂಸಾರದಲ್ಲಿ ಎಲ್ಲೋ ಯಾವುದೋ ಸಮಸ್ಯೆ ಇದೆ ಅನಿಸಿತು ಪ್ರೇಮ್‌ಗೆ. ಗಂಡ ಮನೆಯಲ್ಲಿರುವಾಗ ಕಲ್ಯಾಣಿ ಡಲ್ ಆಗಿರುತ್ತಾಳೆ.

ರಾತ್ರಿ ಹೊತ್ತು ದಂಪತಿಗಳು ದೂರ ದೂರದಲ್ಲಿ ಮಲಗುತ್ತಿದ್ದಾರೆ.

ಒಂದು ರಾತ್ರಿ ಕೃಷ್ಣ ತಡವಾಗಿ ಮನೆಗೆ ಬಂದನು. ಅವನು ಬರುವ ಮೊದಲು ಅವಳು ಯಾರೊಂದಿಗೋ ಮಾತನಾಡುತ್ತಿದ್ದಳು. 'ಅಂದರೆ ನೀನು ಬರುವುದಿಲ್ಲವಾ? ನಾನೊಬ್ಬಳೇ ಹೋಗಬೇಕೇನು?' ಎಂದಳು.

ಆ ಬದಿಯ ವ್ಯಕ್ತಿ ಏನೋ ಹೇಳಿದನು.

'ದುಡ್ಡಾ? ನಾನು ನಿನಗೆ ಫೋನ್ ಮಾಡಿದ್ದು ದುಡ್ಡಿಗೋಸ್ಕರ ಅಲ್ಲ, ಮಾರಲ್ ಸಪೋರ್ಟ್‌ಗೋಸ್ಕರ'

ಮತ್ತೆ ಆ ಬದಿಯಿಂದ ಯಾವುದೋ ಮಾತು.

'ಛೀ! ಇಡು ಫೋನು. ಇನ್ನಾವತ್ತೂ ನನಗೆ ಫೋನ್ ಮಾಡಬೇಡ' ಎಂದು ಸೆಲ್ ಫೋನನ್ನು ಮಂಚದ ಮೇಲೆಸೆದಳು ಕಲ್ಯಾಣಿ.

ಕಿಟಕಿಯಿಂದ ನೋಡುತ್ತ ಅವಳ ಸಂಭಾಷಣೆ ಕೇಳುತ್ತಿದ್ದ ಪ್ರೇಮ್ ಮತ್ತಷ್ಟು ಗೊಂದಲಗೊಂಡನು. ಸ್ವಲ್ಪ ಅರ್ಥವಾಯ್ತು ಎನಿಸಿದರೂ ಏನೋ ಸಂಧಿಗ್ಧತೆ.

ಮತ್ತೆ ಸ್ವಲ್ಪ ಹೊತ್ತಿನಲ್ಲಿ ಆ ಒಗಟು ಒಡೆಯಿತು.

ಅವಳು ಫೋನ್ ಇಟ್ಟ ಹತ್ತು ನಿಮಿಷಗಳಿಗೆ ಕೃಷ್ಣ ಬಂದನು. ಊಟ ಮಾಡಿ ಇಬ್ಬರೂ ಬೆಡ್‌ರೂಂ ಸೇರಿದಾಗ ಅವಳ ಧ್ವನಿ ಗಟ್ಟಿಯಾಗಿ ಕೇಳಿಸಿತು. ಸಿಟ್ಟು ದುಃಖ ಬೆರೆತ ಸ್ವರ.

'ಇಡೀ ಜೀವನ ಕನ್ಯೆಯಾಗಿಯೇ ಬದುಕಬೇಕಾ? ಬರೀ ಮಾಂಸ ಬೆಳೆಸಿದ್ದೀ ಏನು? ಗಂಡಸುತನ ಇಲ್ಲವೇನು? ಇನ್ನು ಬಹಳ ಆಯಸ್ಸಿದೆ. ಈಗಲೇ ಹೀಗಾದರೆ ಏನು ಗತಿ? ಆಯುರ್ವೇದ್ ಮೆಡಿಸಿನ್ಸ್ ಬಳಸು, ಅಥವಾ ಇಂಜೆಕ್ಷನ್ಸ್ ತೆಗೆದುಕೋ' ಎಂದಳು ಕಲ್ಯಾಣಿ.

ಪ್ರೇಮ್ ಕಿಟಕಿಯ ರಂಧ್ರದ ಮೂಲಕ ನೋಡಿದನು. ಮಂಚದ ಮೇಲೆ ಕೃಷ್ಣ ಬೋರಲು ಮಲಗಿದ್ದನು. ಮಂಚದ ತುದಿಯಲ್ಲಿ ಅವಳು ಮೊಳಕಾಲ ಮೇಲೆ ಕುಳಿತಿದ್ದಳು.

'ಹಿಂದೆ ಚೆನ್ನಾಗಿಯೇ ಇದ್ದೆ. ಪೊಲೀಸ್ ಟ್ರೇನಿಂಗ್‌ನಲ್ಲಿ ಆಕ್ಸಿಡೆಂಟ್ ಆಗಿ...' ಬೇಸರದಿಂದಲೇ ಹೇಳಿದನು.

'ಈ ವಿಷಯವನ್ನು ಮದುವೆಗೆ ಮೊದಲೇ ಹೇಳಬಹುದಿತ್ತಲ್ಲ?'

'ಹಾಗಲ್ಲ ಕಲ್ಯಾಣೀ...'

'ಹೂಂ, ಇನ್ನೇನೂ ಹೇಳಬೇಡ. ನನ್ನ ಲೈಫೇ ಹಾಳಾಗಿ ಹೋಯ್ತು' ಎಂದು ಜಡೆಯಲ್ಲಿದ್ದ ಹೂಮಾಲೆಯನ್ನು ಕಿತ್ತೆಸೆದಳು. ಕೂಡಲೆ ಪಕ್ಕದ ರೂಂಗೆ ಹೊರಟು ಹೋದಳು.

ಪ್ರೇಮ್‌ಗೆ ವಿಷಯ ಅರ್ಥವಾಯಿತು. ಇದ್ದ ಸ್ವಲ್ಪ ಅನುಮಾನ ಕೂಡ ಮಾರನೆ ದಿನ ದೂರವಾಯ್ತು.

ಗಂಡ ಕೆಲಸಕ್ಕೆ ಹೊರಟ ಕೂಡಲೆ ಕಲ್ಯಾಣಿ ಹೊರಗೆ ಹೊರಟಳು. ಅವಳ ನಡಿಗೆಯಲ್ಲಿ ಯಾವುದೋ ಗಾಬರಿ ಕಾಣುತ್ತಿತ್ತು. ಅವಳಿಗೆ ತಿಳಿಯದ ಹಾಗೆ ಪ್ರೇಮ್ ಅವಳನ್ನು ಹಿಂಬಾಲಿಸಿದನು. ಅವಳು ನರ್ಸಿಂಗ್ ಹೋಂನೊಳಗೆ ಹೋದಳು. ಆಗವಳ ಮುಖ ಬಾಡಿತ್ತು.

ಹತ್ತು ನಿಮಿಷ ಅಲ್ಲೇ ನಿಂತಿದ್ದು ನಂತರ ನರ್ಸಿಂಗ್ ಹೋಂನೊಳಗೆ ಹೋದನು. ಡಾಕ್ಟರ್‌ನನ್ನು ಕಂಡು 'ನನ್ನ ಹೆಸರು ಕೃಷ್ಣ, ಕಲ್ಯಾಣಿಯ ಹಸ್ಬೆಂಡ್' ಎಂದು ಪರಿಚಯ ಮಾಡಿಕೊಂಡನು.

'ನಿಮ್ಮನ್ನು ಕಳಿಸುವುದಕ್ಕೆ ನಾನೇ ಹೇಳಿದ್ದೆ. ನಿಮ್ಮ ಹೆಂಡತಿಯ ದೇಹದಲ್ಲಿ ರಕ್ತ ಕಡಿಮೆ ಇದೆ. ಆಕೆ ಅಬಾರ್ಷನ್ ಮಾಡಿ ಅಂತ ಹಟ ಹಿಡಿದಿದ್ದಾರೆ. ಈ ಟೈಂನಲ್ಲಿ ಅದು ಬಹಳ ಅಪಾಯಕರ. ಅದಕ್ಕೇ ನಿಮ್ಮ ಜೊತೆ ಮಾತಾಡಬೇಕು ಅಂತ ಹೇಳಿದೆ. ನೀವೇ ಹೆಂಡತೀನ ಕನ್ವಿನ್ಸ್ ಮಾಡಿ' ಎಂದು ಲೇಡಿ ಡಾಕ್ಟರ್ ಹೇಳಿದರು.

ಕೆಲ ದಿನಗಳ ಹಿಂದೆ 'ಬಯಕೇನಾ?' ಎಂದು ಕೇಳಿದಾಗ 'ನಿನ್ನ ಕಂಡು ಅಗ್ರಿರೋ ವಾಮಿಟಿಂಗ್ ಸೆನ್ಸೇಷನ್' ಎಂದು ಹೇಗೆ ಕವರ್ ಮಾಡಿದ್ದಳೋ ನೆನಪಾಯ್ತು.

ಡಾಕ್ಟರ್ ಮಾತು ಮುಗಿಸಿದಾಗ 'ಓ.ಕೆ... ಷ್ಯೂರ್ ಡಾಕ್ಟರ್' ಎಂದು ಅಲ್ಲಿಂದ ಬಂದು ಬಿಟ್ಟನು.

ಈಗವನಿಗೆ ಪರಿಸ್ಥಿತಿ ಪೂರ್ತಿ ಅರ್ಥವಾಗಿತ್ತು.

ಅವಳ ಗಂಡ ನಪುಂಸಕ. ಅವರಿಗೆ ಮದುವೆಯಾಗಿ ಒಂದು ತಿಂಗಳೂ ಆಗಿಲ್ಲ. ಅವಳೀಗ ಗರ್ಭಿಣಿ, ಅಂದರೆ ಮದುವೆಗೆ ಮೊದಲೇ ಗರ್ಭಿಣಿಯಾಗಿದ್ದಳು. ಅದೀಗ ಅವನಿಗೆ ಗೊತ್ತಾಗಿತ್ತು. ಅವಳ ಪ್ರಿಯಕರ ಜಾರಿಕೊಳ್ಳಲು ಕಾರಣ ಹುಡುಕುತ್ತಿದ್ದಾನೆ. 'ನಿನಗೆಷ್ಟು ಮಂದಿಯೋ' ಎಂದನು, ನಂತರ 'ಅಬಾರ್ಷನ್‌ಗೆ ದುಡ್ಡು ಕೊಡ್ತೇನೆ' ಎಂದನು. ಒಟ್ಟಿನಲ್ಲಿ ಕೈತೊಳೆದುಕೊಂಡನು. ಆದರೆ ಡಾಕ್ಟರ್ ಅಬಾರ್ಷನ್ ಮಾಡುವುದಿಲ್ಲ ಅನ್ನುತ್ತಿದ್ದಾರೆ.... ಈ ವಿಷಯವೆಲ್ಲ ಅವಳ ಗಂಡನಿಗೆ ತಿಳಿದಿಲ್ಲ!

ಪ್ರೇಮ್ ತನ್ನಲ್ಲೇ ನಕ್ಕನು. ಕಾರ್ಡ್ ಷೋನಲ್ಲಿರುವಾಗ ಜೋಕರ್ ಸಿಕ್ಕಷ್ಟು ಖುಷಿಯಾಯ್ತು.

***

ಅಭ್ಯಂಜನ ಸ್ನಾನ ಮಾಡಿ ತಲೆಗೂದಲು ಒರೆಸಿಕೊಳ್ಳುತ್ತ ಹಾಲ್‌ಗೆ ಬಂದಳು ಕಲ್ಯಾಣಿ. 'ಮರುಗೇಲ ರಾ ಓ ರಾಮಾ' ಕೀರ್ತನೆ ಎಂದರೆ ಅವಳಿಗೆ ಬಹಳ ಇಷ್ಟ. ದೊಡ್ಡ ಅರ್ಥವಿರುವ ಕೀರ್ತನೆ. 'ಸೂರ್ಯ ಚಂದ್ರರೇ ನಿನ್ನ ಕಣ್ಣುಗಳಾಗಿರಲು ಓ ಪರಾತ್ಪರಾ... ನೀನೆಲ್ಲಿ ಅಡಗಿ ಕೊಳ್ಳಬಲ್ಲೆ......' ಎನ್ನುತ್ತಾರೆ ತ್ಯಾಗರಾಜರು.

ಸಂದರ್ಭಕ್ಕೆ ತಕ್ಕ ಹಾಡು. ಆದರೆ ನೆಗೆಟಿವ್ ಸೆನ್ಸ್‌ನಲ್ಲಿ! ಪ್ರೇಮ್‌ಜಿತ್‌ನಂತಹ ಸರ್ಪ ಬೆನ್ನಟ್ಟಿದಾಗ ಅಡಗಿಕೊಳ್ಳ ಜಾಗವೆಲ್ಲಿರುತ್ತದೆ?

ಡ್ರೆಸ್ಸಿಂಗ್ ರೂಂನಲ್ಲಿ ಕನ್ನಡಿಯ ಬಳಿಗೆ ಹೋಗುತ್ತಿದ್ದಾಗ 'ಹಲೋ' ಎಂದಿದ್ದು ಕೇಳಿಸಿತು. ಯಾರೂ ಕಾಣಿಸಲಿಲ್ಲ.– 'ಅಲ್ಲಿ ಅಲ್ಲ, ಇಲ್ಲಿ' ಎಂದು ಮಲಗುವ ಕೋಣೆಯಿಂದ ಕೇಳಿಸಿತು. ಅವಳು ಸುತ್ತಲೂ ನೋಡಿದಳು. ಅವಳು ಗಡಿಬಿಡಿಯಿಂದ ಅತ್ತ ಹೋಗಿ ಹೊಸ್ತಿಲ ಬಳಿ ನಿಶ್ಚಲಳಾಗಿ ನಿಂತು ಬಿಟ್ಟಳು. ಶೇಷತಲ್ಪದ ಮೇಲೆ ವಿಷ್ಣುವಿನಂತೆ, ತಲೆ ಕೆಳಗೆ ಒಂದು ಕೈ ಇಟ್ಟುಕೊಂಡು ಮಂಚದ ಮೇಲೆ ಮಲಗಿದ್ದನು ಪ್ರೇಮ್.

'ಇಲ್ಲೇನು ಮಾಡ್ತಿದ್ದೀಯ ನೀನು? ' ಅತೀವ ಸಿಟ್ಟಿನಿಂದ ಕೇಳಿದಳು.

'ಬೆಡ್ ರೂಂನಲ್ಲಿ ಗಂಡಸು ಏನು ಮಾಡುತ್ತಾನೆ?... ನಿನಗೋಸ್ಕರ ಕಾಯುತ್ತಾ ಇದ್ದೇನೆ' ಎಂದನು ನಗುತ್ತಾ.

ಅವಳು ಆವೇಶದಿಂದ ಕೆರಳುತ್ತಾ 'ಒಂದು ನಿಮಿಷದಲ್ಲಿ ಹೊರಗೆ ಹೋಗದಿದ್ದರೆ